**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಎಸ್. ಗೋಪಿನಾಥ್ ಇವರ ನಿಯಮ 72 ರ ಅಡಿಯಲ್ಲಿನ ಗಮನ ಸೆಳೆಯುವ ಸೂಚನೆ ಸಂಖ್ಯೆ:50ಕ್ಕೆ ಉತ್ತರ.**

**::ಪ್ರಶ್ನೆ::**

ಆನೇಕಲ್ ತಾಲ್ಲೂಕಿನಲ್ಲಿ ಈಗಾಗಲೇ ಆರು ಕೈಗಾರಿಕೆ ಪ್ರದೇಶಗಳಿದ್ದು, ಮತ್ತು ಇದರ ಜೊತೆಗೆ ಸರ್ಜಾಪುರ ಹೋಬಳಿಯಲ್ಲಿ ಹೊಸ ಕೈಗಾರಿಕೆ ಸ್ಥಾಪಿಸಲು ಸರ್ಕಾರದಿಂದ ಭೂ ಸ್ವಾಧೀನಕ್ಕೆ ಕ್ರಮ ಕೈಗೊಂಡಿದೆ ಅಗತ್ಯಕ್ಕಿಂತ ಹೆಚ್ಚು ಕೈಗಾರಿಕೆ ಪ್ರದೇಶಗಳು ಈ ತಾಲ್ಲೂಕಿನಲ್ಲಿ ಇದ್ದು, ಆದರಿಂದ ಹೆಚ್ಚು ಕೈಗಾರಿಕೆ ಸ್ಥಾಪನೆಗಳಿಂದ ಈಗಾಗಲೇ ಪರಿಸರ ಮಾಲಿನ್ಯ, ಕೆರೆಗಳು ಮಲೀನ, ಹಾಗೂ ಟ್ರಾಫೀಕ್ ಸಮಸ್ಯೆಗಳಿಂದ ತೊಂದರೆಯಾಗುತ್ತದೆ, ಆದರಿಂದ ಸರ್ಕಾರವು ಭೂ ಸ್ವಾಧೀನ ಮಾಡಿರುವ ಪ್ರದೇಶವನ್ನು ಹಿಂಪಡೆಯಬೇಕೆಂದು ನಿಯಮ 72 ರಡಿಯಲ್ಲಿ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರಲ್ಲಿ ಗಮನ ಸೆಳೆಯಲು ಅನುಮತಿ ನೀಡಲು ಈ ಮೂಲಕ ಕೋರುತ್ತೇನೆ.

**:: ಉತ್ತರ ::**

1. ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳುವ ಪ್ರದೇಶದಲ್ಲಿನ ಕೈಗಾರಿಕಾ ನಿವೇಶನಗಳಿಗೆ ಇರುವ ಬೇಡಿಕೆಗಳಿಗೆ ಅನುಗುಣವಾಗಿ ಮಂಡಳಿಯ ಕಾರ್ಯಪಾಲಕ ಅಭಿಯಂತರರು, ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಸಹಯೋಗದೊಂದಿಗೆ ನಿರ್ದಿಷ್ಟ ಸ್ಥಳಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಜಮೀನುಗಳನ್ನು ಗುರುತಿಸಿದ ನಂತರ ಮಂಡಳಿ ಸಭೆಯ ಅನುಮೋದನೆ ಪಡೆದು ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸರ್ಕಾರವು ದಿನಾಂಕ: 18-03-2013 ರಂದು ಹೊರಡಿಸಿರುವ ಸುತ್ತೋಲೆಯಲ್ಲಿನ ನಿರ್ದೇಶನ ಅನುಸಾರ ಆಯಕಟ್ಟಿಗೆ ಧಕ್ಕೆಯುಂಟಾಗದಂತೆ ತೋಟಗಳು, ಫಲವತ್ತಾದ ಜಮೀನುಗಳು ಹಾಗೂ ವಾರ್ಷಿಕ ಎರಡು ಬೆಳೆ ಬೆಳೆಯುವ ಜಮೀನುಗಳು ತರಿ ಜಮೀನುಗಳನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಿ ಕೆಐಎಡಿ ಕಾಯ್ದೆ 1966 ರಡಿ ಜಮೀನನ್ನು ಸ್ವಾಧೀನಪಡಿಸಲು ಕ್ರಮ ವಹಿಸಲಾಗುತ್ತಿದೆ.

2. ಬೆಂಗಳೂರು ಸುತ್ತಮುತ್ತಲೂ ಕೈಗಾರಿಕೆಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ ವ್ಯಾಪ್ತಿಯಲ್ಲಿ SWIFT CITY ಅಭಿವೃದ್ಧಿಪಡಿಸುವುದರ ಜೊತೆಗೆ, ಬೆಂಗಳೂರಿನ ಜನಸಂಖ್ಯೆಯ ಬೆಳವಣಿಗೆಗೆ ಅನುಗುಣವಾಗಿ ಕೈಗಾರಿಕೆಗಳನ್ನು ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ.

3. ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಬಿ.ಹೊಸಹಳ್ಳಿ, ಅಡಿಗಾರಕಲ್ಲಹಳ್ಳಿ, ಎಸ್.ಮೇಡಹಳ್ಳಿ, ಮುತ್ತಾನಲ್ಲೂರು ಅಮಾನಿಕರೆ, ಸೊಳ್ಳೇಪುರ ಮತ್ತು ಹಂದೇನಹಳ್ಳಿ ಗ್ರಾಮಗಳ ಭೂಸ್ವಾಧೀನ ವಿವರಗಳು ಕೆಳಕಂಡಂತಿರುತ್ತದೆ.

| ಕ್ರ. ಸಂ. | ಗ್ರಾಮ | ಪ್ರಾಥಮಿಕ ಅಧಿಸೂಚನೆ | | ಅಂತಿಮ ಅಧಿಸೂಚನೆ | |
|---|---|---|---|---|---|
| | | ದಿನಾಂಕ | ವಿಸ್ತೀರ್ಣ(ಎಕರೆ) | ದಿನಾಂಕ | ವಿಸ್ತೀರ್ಣ(ಎಕರೆ) |
| 1 | ಎಸ್.ಮೇಡಹಳ್ಳಿ ಮತ್ತು ಅಡಿಗಾರಕಲ್ಲಹಳ್ಳಿ | 15.03.2024 | 305-27 | 02.12.2024 | 305-27 |
| 2 | ಸೊಳ್ಳೇಪುರ, ಮುತ್ತನಲ್ಲೂರು ಅಮಾನೀಕೆರೆ ಮತ್ತು ಹಂದೇನಹಳ್ಳಿ | 15.03.2024 | 291-32 | 03.10.2024 | 291-32 |
| 3 | ಬಿಕ್ಕನಹಳ್ಳಿ | 15.03.2024 | 57-00 | 03.10.2024 | 45-20 |
| 4 | ಎಸ್.ಮೇಡಹಳ್ಳಿ ಮತ್ತು ಅಡಿಗಾರಕಲ್ಲಹಳ್ಳಿ | 02.12.2024 | 23-24 | - | - |
| 5 | ಬಿ.ಹೊಸಹಳ್ಳಿ | 01.10.2024 | 401-19 | - | - |

4. ರೈತರ ಜಮೀನುಗಳಿಗೆ ಕೆ.ಐ.ಎ.ಡಿ.ಬಿ. ವತಿಯಿಂದ ನಿಯಮಾನುಸಾರ ಭೂ ದರ ನಿಗದಿಪಡಿಸಿ, ಭೂಮಾಲೀಕರಿಗೆ ಪರಿಹಾರ ವಿತರಿಸಲಾಗುತ್ತದೆ.

5. ಅಧಿಸೂಚನೆಗಳನ್ನು ಹಿಂಪಡೆಯುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

**ಕಡತ ಸಂಖ್ಯೆ: ಸಿಐ 123 ಐಎಪಿ 2025**

**(ಎಂ.ಬಿ.ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು